ಕರ್ನಾಟಕ ಸರ್ಕಾರ

ಸಂಖ್ಯೆ:ಪೌನಿ:ನಿನ:ಘವನಿ:27/04-05
Vol. II

ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು, ದಿನಾಂಕ: ೧೨-01-2009

## ಸುತ್ತೋಲೆ

ವಿಷಯ: ಕರ್ತವ್ಯ ನಿರ್ವಹಣೆ ಸಮಯದಲ್ಲಿ ನೈರ್ಮಲ್ಯ ಕೆಲಸಗಾರರ ಸುರಕ್ಷತೆಗಾಗಿ ನಗರಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ನಅಇ 197 ಜಿಇಎಲ್ 2008, ದಿನಾಂಕ 06-10-2008

2) ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಸಹಾಯಕ ನಿಬಂಧಕರ (ಕಾನೂನು ವಿಭಾಗ) ಪತ್ರ ಸಂಖ್ಯೆ – ದಿನಾಂಕ 17-09-2008

3) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 74 ಬಿಎಂಎಸ್ 2007, ದಿನಾಂಕ 13-07-2007

4) ಪೌರಾಡಳಿತ ನಿರ್ದೇಶನಾಲಯದ ಕಛೇರಿ ಆದೇಶ ಸಂಖ್ಯೆ:ಪೌನಿ:ನಿನ:ಘವನಿ:27/04-05, ದಿನಾಂಕ 19-04-2007

*****

ಕೆ.ಆರ್. ನಗರದಲ್ಲಿ ಇಬ್ಬರು ಪೌರಕಾರ್ಮಿಕರು ನೈರ್ಮಲೀಕರಣದ ಆಳು ಗುಂಡಿಯನ್ನು (Man hole) ಸ್ವಚ್ಛಮಾಡುವ ಸಂದರ್ಭದಲ್ಲಿ ದುರ್ಮರಣ ಹೊಂದಿರುವುದು ವರದಿಯಾಗಿದ್ದು ಅವಶ್ಯಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು ಕಂಡುಬರುವುದರಿಂದ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಸೂಚಿಸಿದೆ.

ನೈರ್ಮಲೀಕರಣದ ಕೊಳವೆಗಳು (UGD pipe lines) ಮತ್ತು ಆಳು ಗುಂಡಿಗಳಲ್ಲಿ ಸ್ವಚ್ಛತಾ / ದುರಸ್ಥಿ ಕಾರ್ಯಗಳಲ್ಲಿ ತೊಡಗುವ ಸಂದರ್ಭಗಳಲ್ಲಿ

1. <u>ವಾಹನ ಸಂಚಾರದ ನಿಯಂತ್ರಣ</u>
   - i) ಸುಲಭವಾಗಿ ಓದಬಹುದಾದ ಎಚ್ಚರಿಕೆ ಫಲಕಗಳನ್ನು ಕಾರ್ಯಸ್ಥಳದ ಸಾಕಷ್ಟು ಮುಂದಿನ ಸ್ಥಾನದಲ್ಲಿರಸಬೇಕು.
   - ii) ಆಳುಗುಂಡಿಯಿಂದ ಹೊರತೆಗೆಯಲಾಗುವ ಹೂಳನ್ನು ತಾತ್ಕಾಲಿಕವಾಗಿ ಹಾಕಲು ಸುತ್ತಲೂ ಬೇಲಿಯನ್ನು ನಿರ್ಮಿಸಿಕೊಳ್ಳುವುದು.
   - iii) ವಾಹನ ಸಂಚಾರವನ್ನು ಸುಲಲಿತಗೊಳಿಸಲು ಚಲನಾ ಮಾರ್ಗವನ್ನು (direction) ಬದಲಿಸುವ ಅವಶ್ಯಕತೆ ಇದ್ದಲ್ಲಿ ಸೂಕ್ತ ಫಲಕಗಳನ್ನು ಹಾಕಿ ನಿಯಂತ್ರಕಗಳನ್ನು ಅಳವಡಿಸುವುದು.
   - iv) ರಸ್ತೆಯ ಎರಡೂ ಕಡೆಗಳಲ್ಲಿ ಬಾವುಟಗಳನ್ನುಪಯೋಗಿಸಿ ಕೆಲಸಗಾರರಿಂದ ವಾಹನ ಸಂಚಾರವನ್ನು ನಿಯಂತ್ರಿಸಿ ಸಂಚಾರ ಕಟ್ಟುವಿಕೆಯನ್ನು ತಪ್ಪಿಸಬೇಕು.

2. <u>ಆಳುಗುಂಡಿಗಳಲ್ಲಿನ ಸುರಕ್ಷತೆ</u>
   - i) ನೈರ್ಮಲೀಕರಣದ ಕೊಳವೆ ಮಾರ್ಗದಲ್ಲಿ ಕಾಮಗಾರಿ ನಡೆಸಬೇಕಾಗಿರುವ ಆಳುಗುಂಡಿಯ ಮುಂದಿರುವ ಮತ್ತು ಹಿಂದಿರುವ ಆಳುಗುಂಡಿಗಳನ್ನು ಮುಕ್ತವಾಯು ಸಂಚಾರಕ್ಕಾಗಿ ಸಾಕಷ್ಟು ಸಮಯ ಮುಂಚಿತವಾಗಿಯೇ ತೆರೆದಿಡಬೇಕು ಅಥವಾ ಗಾಳಿ ಊದುವ ಯಂತ್ರವನ್ನು ಕಾಮಗಾರಿಯ ಮೊದಲು ಮತ್ತು ಕಾಮಗಾರಿಯ ಸಮಯದಲ್ಲಿ ಬಳಸಬೇಕು. ನೈರ್ಮಲೀಕರಣ ಕೊಳವೆಗಳಿಂದ ಗ್ರಾಮಸಾರವನ್ನು ಸಾಧ್ಯವಾದಷ್ಟು ಸೆಸ್‌ಪೂಲ್ ಹೀರುವ ಯಂತ್ರದಿಂದ ಹೊರತೆಗೆಯಬೇಕು.

ii) ಬೆಂಕಿ ಹೊತ್ತಿಕೊಳ್ಳದ ಹಾಗೂ ಸ್ಫೋಟಗೊಳ್ಳದ ದೀಪದ ಸಾಧನವನ್ನು ಉಪಯೋಗಿಸತಕ್ಕದ್ದು.

iii) ಸುರಕ್ಷತಾ ಕವಚ ಹಾಗೂ ಹಗ್ಗವನ್ನು ಬಳಸಬೇಕು. ಆಳುಗುಂಡಿಯ ಮೇಲೆ ಇಬ್ಬರನ್ನು ಇರಿಸಿ ಒಳಗೆ ಇಳಿದಿರುವವರಿಗೆ ಸಂಕೇತ ಹಾಗೂ ಸಹಾಯವನ್ನು ಒದಗಿಸಬೇಕು.

iv) ಆಳುಗುಂಡಿಯಲ್ಲಿ ಕೆಲಸಗಾರರನ್ನು ಇಳಿಸುವ ಮೊದಲು ಹಾಗೂ ಕಾಮಗಾರಿಯನ್ನು ನಡೆಸುವ ಸಮಯದಲ್ಲಿ ವಿಷಯಕಾರಕ/ಅಪಾಯದ ಅನಿಲಗಳ ಇರುವಿಕೆಯ ಬಗ್ಗೆ ಪರಿಕ್ಷೀಸಿ, ಅನಿಲವನ್ನು ಹೊರದೂಡುವ ಕ್ರಮಕೈಗೊಳ್ಳಬೇಕು.

v) ಆಳುಗುಂಡಿಗಳ ಉಂಗುರಗಳು (Rings), ಮೆಟ್ಟಿಲುಗಳು, ಏಣಿಗಳ ಪರಿಸ್ಥಿತಿಯ ಬಗ್ಗೆ ತಿಳಿದುಕೊಂಡು ಗುಂಡಿಗಳಲ್ಲಿ ಇಳಿಯುವಾಗ ಜಾಗರೂಕರಾಗಿರಬೇಕು.

vi) ಗುಂಡಿಗಳ ಅಂಚಿನಲ್ಲಿ ಉಪಕರಣಗಳನ್ನು (tools) ಬೀಳುವ ರೀತಿಯಲ್ಲಿಡಬಾರದು.

vii) ಉಪಕರಣಗಳನ್ನು ಸೂಕ್ತ ಬಕೇಟಿನಲ್ಲಿ ಕೆಲಸಗಾರರಿಗೆ ಗುಂಡಿಯ ಮೇಲಿನಿಂದ ಕೆಳಗೆ ಸುರಕ್ಷಿತವಾಗಿ ಇಳಿಸಿಕೊಡಬೇಕು.

viii) ಅನಿಲ ನಿಯಂತ್ರದ ಮುಖವಾಡ (Mask) ಬಳಸಬೇಕು ಹಾಗೂ ಅವಶ್ಯಕತೆ ಇದ್ದಲ್ಲಿ ಆಮ್ಲಜನಕವನ್ನು ಸರಬರಾಜು ಮಾಡುವ ಮುಖವಾಡವನ್ನು ಒದಗಿಸಬೇಕು.

3. <u>ಸಾಮಾನ್ಯ ಸುರಕ್ಷತಾ ಕಾರ್ಯವಿಧಾನಗಳು</u>

i) ಪ್ರಥಮ ಚಿಕಿತ್ಸೆ ಸಾಧನಗಳನ್ನು ಒದಗಿಸಿ ಸಕಾಲದಲ್ಲಿ ಉಪಯೋಗಿಸಲು ಕ್ರಮ ಕೈಗೊಳ್ಳುವುದು.

ii) ಆಪತ್ಕಾಲದಲ್ಲಿ ತಕ್ಷಣ ವೈದ್ಯರ ಉಪಚಾರದ ಲಭ್ಯತೆಗೆ ತಕ್ಕ ಏರ್ಪಾಡನ್ನು ಮಾಡಿಕೊಂಡಿರಬೇಕು.

iii) ಸುರಕ್ಷತಾ ಸಾಧನಗಳಾದ ಪಾದರಕ್ಷೆಗಳು (Gum boots), ರಬ್ಬರ್ ಕೈಚೀಲಗಳು (Gloves), ಏಪ್ರಾನ್ ಮತ್ತು ಅವಶ್ಯಕ ಇತರೆ ಸಾಧನಗಳನ್ನು ಕೆಲಸಗಾರಿರಿಗೆ ವಿತರಿಸಿ ಬಳಸಿಕೊಳ್ಳಲು ಕಡ್ಡಾಯಪಡಿಸುವುದು.

iv) ಹತ್ತಿ ಬಟ್ಟೆಗಳನ್ನು ವಿತರಿಸಿ ಬಳಸಿಕೊಳ್ಳಲು ತಿಳಿಸುವುದು.

v) ಸಾಗಿಸಬಲ್ಲ ಅಗ್ನಿಶಾಮಕ ಉಪಕರಣಗಳನ್ನು ಒದಗಿಸಿ ಸಕಾಲದಲ್ಲಿ ಬಳಸಲು ಕ್ರಮ ಕೈಗೊಳ್ಳುವುದು.

ಯಾವುದೇ ರೀತಿಯ ನೈರ್ಮಲ್ಯ ಕಾಮಗಾರಿಗಳನ್ನು ಹೊರಗುತ್ತಿಗೆ ಮೇರೆಗೆ ನಿರ್ವಹಿಸಲು ನಗರಸ್ಥಳೀಯ ಸಂಸ್ಥೆಗಳು ಉದ್ದೇಶಿಸಿದಲ್ಲಿ ಮೇಲೆ ತಿಳಿಸಿದ ಸುರಕ್ಷತಾ ಕ್ರಮಗಳನ್ನು ಅಳವಡಿಸುವಂತೆ ಸೇವೆ ಒದಗಿಸುವವರಿಗೆ ಸೂಚಿಸಬೇಕಾಗಿರುತ್ತದೆ ಮತ್ತು ಮೇಲೆ ತಿಳಿಸಿದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಯಾವುದೇ ಅವಘಡವು ಮರುಕಳಿಸಿದಲ್ಲಿ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ನಿಯಮಾವಳಿಯಂತೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಆಯುಕ್ತರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು
   ಮಹಾನಗರಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ/ಅಧಿಸೂಚಿತ ಪ್ರದೇಶ ಸಮಿತಿ

ಪ್ರತಿಯನ್ನು:
ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರುರವರ ಮಾಹಿತಿಗಾಗಿ.